# ಭಾರತ - ಚೀನಾ ಗಡಿ ವಿವಾದ

Peace cann't be Kept by force
It can only be achieved by understanding.

Albert Einstein.

ಜಗತ್ತಿನಲ್ಲಿ ಭಾರತ ಮತ್ತು ಚೀನಾ ಎರಡು ಪ್ರಮುಖ ರಾಷ್ಟ್ರಗಳಾಗಿದ್ದು ಸುಮಾರು ೨೦೦೦ ವರ್ಷಗಳ ಇತಿಹಾಸವನ್ನು ಹೊಂದಿವೆ. ಆಧುನಿಕ ಸಂಬಂಧವು 1950 ರಿಂದ ಪ್ರಾರಂಭವಾಗಿದೆ. ಜಗತ್ತಿನ ಒಟ್ಟು ಜನಸಂಖ್ಯೆಯಲ್ಲಿ ಭಾರತದ ಶೇಕಡಾ 17.5% ರಷ್ಟಿದ್ದರೆ ಚೀನಾದ ಶೇಕಡಾ ಶೇ ೨೦ ರಷ್ಟಿದೆ. ಅದೇ ರೀತಿಯಾಗಿ ಜಿಡಿಪಿಯಲ್ಲಿ ಭಾರತ ಶೇಕಡಾ 6.6% ರಷ್ಟಿದ್ದರೆ ಚೀನಾದ ಶೇಕಡಾ 6.5% ರಷ್ಟಿದೆ. ಇವೆರಡು ದೇಶಗಳು ಆರ್ಥಿಕತೆಯಲ್ಲಿ ಅತಿ ವೇಗವಾಗಿ ಮುನ್ನುಗ್ಗುತ್ತಿವೆ.

ಭಾರತ ಮತ್ತು ಚೀನಾದ ನಡುವೆ 3917 km ಉದ್ದದ ಗಡಿ ರೇಖೆ ಇದ್ದು ಇದು ಭಾರತದ 5 ರಾಜ್ಯಗಳ ನಡುವೆ ವಿಸ್ತರಿಸಿದೆ. ಇದಕ್ಕೆ ಮ್ಯಾಕ್ ಮೋಹನ್ ಗಡಿರೇಖೆ ಎಂದು ಕರೆಯುತ್ತಾರೆ.

ಚೀನಾ ಗಡಿ ವಿಸ್ತರಣಾ ಆಕ್ರಮಣಕಾರಿ ನೀತಿಯಿಂದಾಗಿ ಹಲವಾರು ರಾಷ್ಟ್ರಗಳೊಂದಿಗೆ ಗಡಿ ವಿವಾದ ಹೊಂದಿದೆ ಅವರಲ್ಲಿ ಭಾರತವು ಒಂದು. ಇತ್ತೀಚಿಗೆ ಭಾರತ - ಚೀನಾ ನಡುವೆ ಬಹು ಪ್ರಾಮುಖ್ಯತೆ ಪಡೆದ ಗಡಿ ವಿವಾದವೆಂದರೆ ಡೋಕ್ಲಾಮ್ ಗಡಿ ವಿವಾದ.

downloaded from: www.kpscvaani.com

## ಹಿನ್ನೆಲೆ

ಭಾರತ - ಚೀನಾ ಸಂಬಂಧ 4ನೇ ಶತಮಾನದಲ್ಲಿ ಫಾಹಿಯಾನನ ಆಗಮನದಿಂದ ಆರಂಭವಾಯಿತು. ಭಾರತ - ಚೀನಾದ ಮಧ್ಯೆ ಇದ್ದ ರೇಷ್ಮೆ ಮಾರ್ಗದ ಮೂಲಕ ಭಾರತದಲ್ಲಿದ್ದ ಬೌದ್ಧ ಧರ್ಮ ಚೀನಾಕ್ಕೆ ಪಸರಿಸಿತು. ವಸ್ತುಗಳ ವಿನಿಮಯ ನಡೆಯುತ್ತಿತ್ತು. ಭಾರತ - ಚೀನಾ ಸಂಬಂಧ ಹೀಗೆ ಮುಂದುವರೆದು ಸ್ವಾತಂತ್ರ್ಯಾನಂತರವು ಮುಂದುವರೆಯಿತು.

ಚೀನಾದಲ್ಲಿ ಕಮ್ಯುನಿಷ್ಟ ಸರಕಾರವಿದ್ದರೆ ಭಾರತದಲ್ಲಿ ಪ್ರಜಾಪ್ರಭುತ್ವ ಸರಕಾರವಿದೆ. 1954ರಲ್ಲಿ ನೆಹರು ಮತ್ತು ಚೌಎನ್‌ಲಾಯ್ ನಡುವೆ ಪಂಚಶೀಲ ತತ್ವ ಒಪ್ಪಂದವಾಯಿತು. ಈ 5 ತತ್ವಗಳನ್ನು ಚೀನಾದ ಕಮ್ಯುನಿಷ್ಟ ಸರಕಾರ 1962ರ ಯುದ್ಧದಲ್ಲಿ ಉಲ್ಲಂಘಿಸಿತು. ಇದರಿಂದಾಗಿ ಈ ಹಿಂದೆ ಸಂಬಂಧ ಹಾಳಾಯಿತು. ಇದು 21ನೇ ಶತಮಾನದಲ್ಲೂ ಮುಂದುವರೆದಿದೆ.

ಭಾರತ - ಮತ್ತು ಚೀನಾದ ನಡುವೆ ಇರುವ ವಿವಾದಗ್ರಸ್ತ ಸ್ಥಳಗಳು

1) ಡೋಕ್ಲಾಮ್ (ಸಿಕ್ಕಿಂ ಸಮೀಪದ ಪ್ರದೇಶ
2) ಬ್ರಹ್ಮಪುತ್ರಾ ನೀರಿನ ವಿವಾದ
3) ಅಕ್ಸಾಯ್‌ಚಿನ್ (ಜಮ್ಮು & ಕಾಶ್ಮೀರ)
4) ಅರುಣಾಚಲ ಪ್ರದೇಶ (ದಕ್ಷಿಣ ಟಿಬೆಟ್)

## ಡೋಕ್ಲಾಮ್ ವಿವಾದ

ಇದು ಒಂದು ತ್ರಿಸಂಧಿ ವಿವಾದವಾಗಿದ್ದು ಭಾರತ, ಚೀನಾ, ಭೂತಾನಗೆ ಸಂಬಂಧಿಸಿದೆ.

downloaded from: www.kpscvaani.com




ಡೋಕ್ಲಾಮ್ ಪ್ರದೇಶವು ಭೂತಾನದಲ್ಲಿ ಬರುತ್ತದೆ. ಇದು ಸಿಕ್ಕಿಂ ರಾಜ್ಯಕ್ಕೆ ಅತಿ ಹತ್ತಿರವಾದ ಪ್ರದೇಶವಾಗಿದೆ. ಈ ಡೋಕ್ಲಾಮ್‌ದ -ವರೆಗೆ ರಸ್ತೆಯನ್ನು ನಿರ್ಮಿಸಬೇಕೆಂದು ಚೀನಾ ಯೋಜಿಸುತ್ತಿದೆ. ಇದರ ಹಿಂದೆ ಚೀನಾದ ದೊಡ್ಡ ಷಡ್ಯಂತ್ರವೇ ಅಡಗಿದೆ. ಯುದ್ಧದ ಸಂದರ್ಭದಲ್ಲಿ ಭಾರತದ ಮೇಲೆ ದಾಳಿ ಮಾಡಲು ಶಸ್ತ್ರಾಸ್ತ್ರ ಸಾಗಣೆ ಮಾಡಲು ಈ ರಸ್ತೆ ಅವರಿಗೆ ತುಂಬಾ ಅನುಕೂಲಕೆ ಬರುತ್ತದೆ. ಜೊತೆಗೆ ಡೋಕ್ಲಾಮ್‌ಗೆ ಅತಿ ಸಮೀಪದಲ್ಲಿರುವ ಸಿಕ್ಕಿಂ ತನ್ನ ವಶಕ್ಕೆ ಪಡೆಯುವುದರ ಜೊತೆಗೆ ಈಶಾನ್ಯ ರಾಜ್ಯಗ-ಳ ಸಂಪರ್ಕ ಸಾಧಿಸಲು ಇರುವ 23km ಅಗಲವಾದ ಚಿಕನ್-ನೆಕ್ ಆಫ್ ಇಂಡಿಯಾ ಎಂದು ಕರೆಯಲ್ಪಡುವ ಸಿಲಿಗುರಿಯನ್ನು ವಶಪಡಿಸಿಕೊಂಡು ಈಶಾನ್ಯ ರಾಜ್ಯಗಳ ಸಂಪರ್ಕ ಕಡಿತ ಮಾಡಿ ಭಾರತದ ಸಾರ್ವಭೌಮತ್ವಕ್ಕೆ ಧಕ್ಕೆಯನ್ನುಂಟು ಮಾಡಬೇಕೆಂಬುದು ಇದರ ಹಿಂದಿರುವ ಉದ್ದೇಶವಾಗಿದೆ.

ಇದೆಲ್ಲವನ್ನು ಅರಿತ ಭಾರತ ಭೂತಾನ ಸೈನ್ಯಕ್ಕೆ ಬೆಂಬಲ ನೀಡಿ ಚೀನಾದ ಸೈನ್ಯವನ್ನು ಹಿಮ್ಮೆಟ್ಟುವಂತೆ ಮಾಡಿದೆ.

downloaded from: www.kpscvaani.com

ಚೀನಾ ಮತ್ತು ಭಾರತ ತಮ್ಮ ಆರ್ಥಿಕ ಮತ್ತು ರಾಜಕೀಯ ಪ್ರಭಾವವನ್ನು ಅಂತರಾಷ್ಟ್ರೀಯ ವೇದಿಕೆಗಳಲ್ಲಿ ಪ್ರದರ್ಶಿಸಲು ಪ್ರಯತ್ನಿಸುತ್ತಿವೆ. ಇದರ ಚೀನಾ ಅನಾರೋಗ್ಯಕರ ಪೈಪೋಟಿ ನೀಡುತ್ತಿದೆ. ಯೋಜನೆಗಳ ಮೂಲಕ ಭಾರತದ ಏಳಿಗೆಗೆ ತೊಂದರೆಯನ್ನುಂಟು ಮಾಡುತ್ತಿದೆ.

ಉದಾಹರಣೆಗೆ 1> NSG (Nuclear Suppliers Group)ಗೆ ಭಾರತ ಸೇರ್ಪಡೆಯಾಗದಂತೆ ನೋಡಿಕೊಂಡಿತು.

② ಭಾರತವನ್ನು ಹಣಿಯುವುದಕ್ಕಾಗಿ ಪಾಕಿಸ್ತಾನದ ಜೊತೆ ಸ್ನೇಹ ಸಂಬಂಧವನ್ನು ಬೆಳೆಸುತ್ತಿದೆ.

③ ಕಡಿಮೆ ಬೆಲೆಯ ಕಡಿಮೆ ಬೆಲೆಬಾಳುವ ವಸ್ತುಗಳನ್ನು ಭಾರತದಲ್ಲಿ ತಂದು ಸುರಿಯುತ್ತಿದೆ.

④ ಭಾರತದ ಮೇಲೆ ದಾಳಿ ಮಾಡಲು ಅನುಕೂಲವಾಗುವಂತೆ String of pearls ಯೋಜನೆ ರೂಪಿಸುತ್ತಿದೆ. ಈ ಯೋಜನೆ ಪ್ರಕಾರ ಬಾಂಗ್ಲಾದ ಚಿತ್ತಗಂಗದಲ್ಲಿ, ಶ್ರೀಲಂಕಾದ ಹಂಬಂಟೋಟದಲ್ಲಿ, ಮಾಲ್ಡೀವ್ಸ್‌ನ ಮಾರಿಯಾದಲ್ಲಿ, ಪಾಕಿಸ್ತಾನದ ಗದ್ವಾರನಲ್ಲಿ ತನ್ನ ಸೇನಾ ನೆಲೆಗಳನ್ನು ತೆರೆಯುತ್ತಿದೆ.

⑤ ಚೀನಾ-ಪಾಕಿಸ್ತಾನ ಎಕನಾಮಿಕ್ ಕಾರಿಡಾರ್ PoK ಮತ್ತು ಅಕ್ಸಾಯ್‌ಚೀನದ ಮೂಲಕ ಹಾದು ಹೋಗುತ್ತದೆ. ಇದು ಒಂದು ರೀತಿಯಲ್ಲಿ ಭಾರತಕ್ಕೆ ಬೆದರಿಕೆಯಾಗಿದೆ.

⑥ ಚೀನಾದವರು ಬ್ರಹ್ಮಪುತ್ರಾ ನದಿಗೆ ಅಣೆಕಟ್ಟು ಕಟ್ಟಿ ಮುನ್ಸೂಚನೆ ನೀಡದೆ ನೀರು ಹರಿಸುತ್ತಿರುವುದರಿಂದ ಈಶಾನ್ಯ ರಾಜ್ಯಗಳಲ್ಲಿ ಪ್ರವಾಹ ಪರಿಸ್ಥಿತಿ ತಲೆದೋರುತ್ತಿದೆ.

⑦ ಅರುಣಾಚಲಪ್ರದೇಶದ ಬಹುಭಾಗವನ್ನು ಚೀನಾ ತನ್ನದೆಂದು ವಾದಿಸುತ್ತಿದೆ.

downloaded from: www.kpscvaani.com

ಭಾರತವು ಪ್ರಧಾನಿ ಜಗತ್ತಿನಲ್ಲಿ ಪ್ರಬಲ ಆರ್ಥಿಕ ರಾಷ್ಟ್ರವಾಗಿ ಬೆಳೆಯುತ್ತಿರುವ ಚೀನಾದ ಬೆದರಿಕೆಗಳಿಗೆ ತಕ್ಕ ಪ್ರತ್ಯುತ್ತರವನ್ನು ನೀಡುತ್ತಿದೆ.

ಉದಾ:- ① ಚೀನಾ ಬ್ರಿಕ್ಸ್ ರಾಷ್ಟ್ರಗಳನ್ನು ವಿಸ್ತರಣೆ ಮಾಡಿ-ಇಲ್ಲಿ ಪಾಕಿಸ್ತಾನವನ್ನು ಸೇರ್ಪಡೆ ಮಾಡಬೇಕೆಂದು ಮಾಡಿತ್ತು-ಅದಕ್ಕೆ ಭಾರತ ತಡೆಯೊಡ್ಡಿದೆ.

② ಚೀನಾ ಒಂದು ವೇಳೆ ದಾಳಿ ಮಾಡಿದರೆ ಹೊರಗಿನಿಂದ ದಾಳಿ ಮಾಡಲು ಭಾರತ ಇರಾನ್‌ದಲ್ಲಿ ಚಹಬಾರ ಬಂದರು ಅಭಿವೃದ್ಧಿ-ಪಡಿಸಿದೆ.

③ ಚೀನಾದ ವಿರುದ್ಧವಾಗಿರುವ ದೇಶಗಳ ಜೊತೆಗೆ ಬಾಂಧವ್ಯ ಬೆಳೆಸುತ್ತಿದೆ.

④ ಭಾರತೀಯರು ಸ್ವಯಂಪ್ರೇರಿತರಾಗಿ ಚೀನಾದ ವಸ್ತುಗಳ-ನ್ನು ಬಹಿಷ್ಕರಿಸುತ್ತಿದ್ದಾರೆ.

ಚೀನಾ-ಭಾರತ ಸಂಬಂಧ ವೃದ್ಧಿಯಿಂದಾಗುವ ಲಾಭಗಳು.

① ಜಗತ್ತಿನಲ್ಲಿ ಎರಡು ಆರ್ಥಿಕ ಪ್ರಬಲ ರಾಷ್ಟ್ರಗಳಾಗುವವು.

② ಅಪಾರ ಜನಸಂಖ್ಯೆಯನ್ನು ಮಾನವ ಸಂಪನ್ಮೂಲವಾಗಿ ಪರಿವ-ರ್ತಿಸಿ ಅಭಿವೃದ್ಧಿ ಕಾರ್ಯಗಳಿಗೆ ಬಳಸುವದು.

③ ಭಯೋತ್ಪಾದನೆ ನಿರ್ಮೂಲನೆಗೆ ಜಂಟಿ ಕಾರ್ಯಾಚರಣೆ.

④ ಬಾಹ್ಯಾಕಾಶ ತಂತ್ರಜ್ಞಾನ ವಿನಿಮಯ.

⑤ IMF ಮತ್ತು World Bank ಗೆ ಪರ್ಯಾಯವಾಗಿ BRICS ನ ಅಭಿವೃದ್ಧಿ.

⑥ ರಕ್ಷಣಾ ವೆಚ್ಚಕಾಗಿ ಉಪಯೋಗಿಸುವ ಹಣವನ್ನು ಮೂಲ ಸೌಕರ್ಯಕ್ಕೆ ಬಳಸುವದರಿಂದ ಎರಡು ದೇಶಗಳ ಪ್ರಗತಿ ಸಾಧ್ಯ.

⑦ ಮುಖ್ಯವಾಗಿ ಏಷ್ಯಾ ಖಂಡದಲ್ಲಿ ಶಾಂತಿ ನೆಲೆಸುತ್ತದೆ.

downloaded from: www.kpscvaani.com

## ಉಪಸಂಹಾರ

ಹೆಚ್ಚುಕಡಿಮೆ ಜಗತ್ತಿನ ಎಲ್ಲಾ ದೇಶಗಳನ್ನು ಪರಿಗಣಿಸಿದಾಗ ಒಂದು ದೇಶ ಇನ್ನೊಂದು ದೇಶದೊಡನೆ ಗಡಿಯನ್ನು ಹಂಚಿಕೊಂಡಿದೆ. ಅದು ಚಿಕ್ಕ ರಾಷ್ಟ್ರವಿರಬಹುದು ಅಥವಾ ದೊಡ್ಡ ರಾಷ್ಟ್ರವಿರಬಹುದು.

ಒಂದು ಉಕ್ತಿಯಂತೆ "ನಾವು ನಮ್ಮ ಗೆಳೆಯರನ್ನು ಬದಲಿಸಬಹುದು, ಆದರೆ ನೆರೆಹೊರೆಯವರನ್ನಲ್ಲ." ಆದುದರಿಂದ ಭಾರತ ಬಾಂಗ್ಲಾದ ನಂತರ ಅತಿ ಹೆಚ್ಚು ಗಡಿಯನ್ನು ಹೊಂದಿರುವುದು ಚೀನಾದ ಜೊತೆಗೆ ಇದು ನಮ್ಮ ಪ್ರಮುಖ ನೆರೆಹೊರೆಯ ರಾಷ್ಟ್ರ. ಗಡಿ ವಿವಾದ ಶಮನಕ್ಕೆ ಯುದ್ಧ ಒಂದು ಪರಿಹಾರವಲ್ಲ. ಶಾಂತಿ ಮಾತುಕತೆ ಅದಕ್ಕಿಂತಲೂ ಪ್ರಭಾವಶಾಲಿಯಾದುದು. ನಮ್ಮ ಶಾಂತಿ ಮಂತ್ರ ಮಾತ್ರ ರಾಜತಾಂತ್ರಿಕತೆ ಇತ್ತೀಚಿನ ಡೋಕ್ಲಾಮ್ ವಿವಾದ ಶಮನಕ್ಕೆ ಕಾರಣವಾಯಿತು. ಯುದ್ಧದ ಆಚೆಗೂ ಕೂಡ ಪರಿಹಾರಗಳು ಇವೆ ಎಂಬುವುದನ್ನು ಶಾಂತಿಪ್ರಿಯವಾದ ಭಾರತ ಜಗತ್ತಿಗೆ ತೋರಿಸಿದೆ.

C.M. Mathapati
B.S. Uppaladinni

downloaded from: www.kpscvaani.com